## ಬೆಲೆ ವ್ಯತ್ಯಾಸ ಏಕೆ?

ಸಾವಯವ ಮತ್ತು ಸಾಮಾನ್ಯ ಉತ್ಪನ್ನಗಳ ಬೆಲೆಯಲ್ಲಿ ದೊಡ್ಡ ವ್ಯತ್ಯಾಸ ಇರುತ್ತದೆ. ಅದಕ್ಕೆ ಸಾಕಷ್ಟು ಕಾರಣಗಳಿವೆ. ಪ್ರತಿವರ್ಷವೂ ಸಾವಯವ ದೃಢೀಕರಣ ಪತ್ರದ ಅವಶ್ಯಕತೆಯಿರುವುದರಿಂದ APEDA ಅಥವಾ ಇನ್ನಿತರ ಏಜೆನ್ಸಿಗಳಿಗೆ ಸಾವಯವ ರೈತರು ಪ್ರತಿವರ್ಷವೂ ಶುಲ್ಕವನ್ನು ಕಟ್ಟಬೇಕಾಗುತ್ತದೆ. ಮೂರು ವರ್ಷಗಳವರೆಗೆ ಸತತವಾಗಿ ಪರಿಶೀಲಿಸಿದ ಮೇಲೆ ಮಾತ್ರ ಈ ಸಂಸ್ಥೆಗಳು ಪ್ರಮಾಣ ಪತ್ರ ನೀಡುತ್ತವೆ. ಮಣ್ಣಿನ ಸಾರವನ್ನು ನೈಸರ್ಗಿಕವಾಗಿ ಹೆಚ್ಚಿಸಲು ವರ್ಷಗಳೇ ಹಿಡಿಯುತ್ತವೆ. ಆ ಸಮಯದಲ್ಲಿ ಇಳುವರಿ ತುಂಬಾ ಕಡಿಮೆ. ಕೃಷಿಯ ಯಾವ ಹಂತದಲ್ಲೂ ಯಂತ್ರಗಳನ್ನು ಬಳಸದಿರುವುದರಿಂದ ಅಪಾರ ಮಾನವ ಶ್ರಮ ಮತ್ತು ಹಣ ಬೇಕು. ಸಾವಯವ ಬೇಸಾಯದ ಜೊತೆಗೆ ಪಶು ಸಾಗಾಣಿಕೆಯನ್ನೂ ಮಾಡಬೇಕಾಗಿರುವುದರಿಂದ ಅವುಗಳನ್ನು ನೋಡಿಕೊಳ್ಳುವ ಶ್ರಮವೂ ಸೇರಿಕೊಳ್ಳುತ್ತದೆ.

ಕೃಷಿ ಭೂಮಿಯ ಮುಚ್ಚುವಿಕೆಗೂ ಅಪಾರ ಶ್ರಮ ಬೇಕು. ಕಾಂಪೋಸ್ಟ್ ಮತ್ತು ಪ್ರಾಣಿಜನ್ಯ ಗೊಬ್ಬರಗಳನ್ನು ಬಳಸುವುದರಿಂದ ಸಾಗಾಣಿಕಾ ಖರ್ಚು ಹೆಚ್ಚು. ಜಿ.ಎಂ.ಒ. ಅಲ್ಲದ ಶುದ್ಧ ಬೀಜಗಳ ಪೂರೈಕೆ ಕಡಿಮೆ ಇರುವುದರಿಂದ ದುಬಾರಿ ದರ ಕೊಡಬೇಕು. ಸಾವಯವ ಗೊಬ್ಬರದ ಮತ್ತು ಕೀಟನಾಶಕಗಳ ಸಾಗಾಣಿಕೆಯೂ ಕಷ್ಟ ಮತ್ತು ಬೆಲೆಯೂ ಹೆಚ್ಚು. ರಾಸಾಯನಿಕ ಕೀಟನಾಶಕ ಮತ್ತು ಸಂರಕ್ಷಕಗಳ ಬಳಕೆ ಇಲ್ಲದಿರುವುದರಿಂದ ದೀರ್ಘಾವಧಿ ಸಂಗ್ರಹಯೋಗ್ಯವಲ್ಲ. ಹಸಿರು ಗೊಬ್ಬರ ತಯಾರಿಸುವಾಗ ಕೃಷಿಭೂಮಿಯು ವ್ಯರ್ಥವಾಗುತ್ತದೆ. ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ಮತ್ತು ಸಾಗಾಣಿಕೆಯ ಸಮಸ್ಯೆಯಿದೆ. ಇಂಥ ಹತ್ತು ಹಲವು ಕಾರಣಗಳನ್ನು ಪಟ್ಟಿ ಮಾಡಿದರೂ ಸಾವಯವ ಮಾದರಿಯಲ್ಲಿ ಬೆಳೆಯುವ ಖರ್ಚು ಶೇ. ಏಳರಷ್ಟು ಹೆಚ್ಚಾದರೆ ಬೆಲೆ ಮಾತ್ರ ಶೇ. ನಲವತ್ತೈದು ಜಾಸ್ತಿ. ಅಂದರೆ ಇದರಲ್ಲೂ ಮಧ್ಯವರ್ತಿಗಳದೇ ಕಾರುಬಾರು. ಸಾವಯವವೆಂಬ ಹೆಸರಿನಲ್ಲಿ ದುಡ್ಡು ಮಾಡುವ ದಂಧೆಗಳಿಗೇನೂ ಕಮ್ಮಿಯಿಲ್ಲ.

ಸಮಸ್ಯೆಯೇನೋ ನೀಗಿತು. ಇಳುವರಿಯೂ ಗಣನೀಯವಾಗಿ ಹೆಚ್ಚಿ ಆಹಾರದ ಬೆಲೆಯೂ ಇಳಿಯಿತು. ರೈತರ ಆದಾಯವೂ ಏರಿತು. ಆದರೆ ಹಿಗ್ಗಾಮುಗ್ಗಾ ಬಳಸಿದ ರಾಸಾಯನಿಕ ಗೊಬ್ಬರ, ಕೀಟನಾಶಕಗಳು, ಹೈಬ್ರಿಡ್ ಬೀಜಗಳ ಅತಿಯಾದ ಬಳಕೆಯಿಂದ ಆದ ಪರಿಸರ ಹಾನಿ, ಮಾಲಿನ್ಯತೆ, ಆರೋಗ್ಯದ ಮೇಲಾದ ದುಷ್ಪರಿಣಾಮಗಳು, ಮಣ್ಣು ಸವಕಳಿ, ನೀರಿನ ಹೆಚ್ಚು ಬಳಕೆ, ಮಣ್ಣಿನ ಫಲವತ್ತತೆಯ ನಾಶ, ನಮ್ಮ ದೇಸಿ ಬೀಜಗಳು ಮತ್ತು ಬೆಳೆಗಳು ಕಣ್ಮರೆಯಾಗಿದ್ದು, ಮೊದಲಾದ ವಿಪರೀತ ಪರಿಣಾಮಗಳ ಕೆಂಡವನ್ನು ಸೆರಗಿನಲ್ಲಿ ಕಟ್ಟಿಕೊಂಡಾಯ್ತು. ಕೃಷಿಕ್ರಾಂತಿಯ ಪ್ರಮುಖ ಪ್ರದೇಶಗಳು ಕ್ಯಾನ್ಸರ್ ಪೀಡಿತ ಕ್ಷೇತ್ರಗಳಾಗಿ ಬದಲಾಗಲು ಜಾಸ್ತಿ ಸಮಯ ಹಿಡಿಯಲಿಲ್ಲ.

ಹಸಿರುಕ್ರಾಂತಿಯ ಹಾನಿಕಾರಕ ಪರಿಣಾಮಗಳನ್ನು ಮನಗಂಡ ಮೇಲೆ ನಮ್ಮ ದೇಶದಲ್ಲೂ ಕೃಷಿ ವಿಧಾನಗಳನ್ನು ಹೆಚ್ಚು ನೈಸರ್ಗಿಕ ಮತ್ತು ಪರಿಸರಸ್ನೇಹಿ ಮಾಡುವತ್ತ ಗಮನಹರಿಸಲಾಯಿತು. ಭಾರತದಲ್ಲಿ ಸಾವಯವ ಕೃಷಿ ಸಂಬಂಧದಲ್ಲಿ ಮೊಟ್ಟ ಮೊದಲ ಶೃಂಗಸಭೆ ನಡೆದದ್ದು 1984ರಲ್ಲಿ, ವಾರ್ಧಾದಲ್ಲಿ. **UPASI** ಮತ್ತು **ARISE** ಎನ್ನುವ ಎರಡು ಸಂಘಟನೆಗಳು 1993 ಮತ್ತು 1995ರಲ್ಲಿ ಸಾವಯವ ಬೇಸಾಯಕ್ಕೆ ಸಂಬಂಧಪಟ್ಟಂತೆ ರಾಷ್ಟ್ರಮಟ್ಟದ ಸಭೆಗಳನ್ನು ಏರ್ಪಡಿಸಿದವು. ಇವುಗಳಲ್ಲಿ ಮುಖ್ಯವಾದದ್ದು ಪಾಂಡಿಚೆರಿಯಲ್ಲಿ ನಡೆದ ಸಭೆ. ಭಾರತದ ಸಾವಯವ ಬೇಸಾಯದ ಇತಿಹಾಸದಲ್ಲಿ ಅತಿಮುಖ್ಯವಾದ ಮೈಲಿಗಲ್ಲು ಅಂದರೆ, 2000ದಲ್ಲಿ ಜಾರಿಗೆ ತಂದ ಸಾವಯವ ಉತ್ಪಾದನೆಯ ರಾಷ್ಟ್ರೀಯ ನೀತಿ (**NPOP**).

‘ಇಂಡಿಯಾ ಆರ್ಗ್ಯಾನಿಕ್’ ಲೋಗೊವನ್ನು 2002ರಲ್ಲಿ ಬಿಡುಗಡೆ ಮಾಡಲಾಯಿತು. ‘ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಸಾವಯವ ಉತ್ಪನ್ನಗಳು’ ಎಂಬ ವಿಷಯದಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನವನ್ನೂ ಆಯೋಜಿಸಿ ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಸಾವಯವ ಉತ್ಪನ್ನಗಳಿಗೆ ಬೇಡಿಕೆಯ ಕುರಿತು ಚರ್ಚಿಸಲಾಯಿತು. ಈ ಎಲ್ಲ ಪ್ರಯತ್ನಗಳು, ಸಾವಯವ ಉತ್ಪನ್ನಗಳ ರಫ್ತಿನಿಂದ ಸಿಗುವ ಆದಾಯ ಮತ್ತು ಆಹಾರದ ಗುಣಮಟ್ಟದ ಮೇಲೆ ಜನರಲ್ಲಿ ಹೆಚ್ಚಿದ ಕಾಳಜಿಯಿಂದ ಭಾರತದಲ್ಲಿ ಸಾವಯವ ಕೃಷಿ ನಿಧಾನವಾಗಿಯಾದರೂ ಆರಂಭಗೊಂಡಿತು. 2002ರಲ್ಲಿ ಭಾರತದ ಸಾವಯವ ಕೃಷಿಯಿಂದಾದ ಸರಾಸರಿ ಉತ್ಪಾದನೆ 14000 ಟನ್ನುಗಳಷ್ಟಾದರೆ, 11000 ಟನ್ ಆಹಾರಧಾನ್ಯಗಳನ್ನು ರಫ್ತು ಮಾಡಲಾಯಿತು. 2020ರಲ್ಲಿ ಭಾರತದ ಸಾವಯವ ಮಾರುಕಟ್ಟೆಯ ಮೌಲ್ಯ ಸುಮಾರು 849 ದಶಲಕ್ಷಗಳಷ್ಟಾಯಿತು. ವಾರ್ಷಿಕ ಸರಾಸರಿ ಶೇ. 20.5 ದರದಲ್ಲಿ ಏರುತ್ತಿರುವ ಭಾರತೀಯ ಸಾವಯವ ಮಾರುಕಟ್ಟೆ 2026ರಲ್ಲಿ 2601 ದಶಲಕ್ಷ ಡಾಲರುಗಳ ವಹಿವಾಟು ನಡೆಸುವ ಗುರಿ ಹೊಂದಿದೆ.

### ಸಿಕ್ಕಿಂ ರಾಜ್ಯದ ಸಾವಯವ ಕ್ರಾಂತಿ

ನಮ್ಮ ದೇಶದಲ್ಲಿ ಮೊಟ್ಟಮೊದಲು ನಿಜವಾದ ಸಾವಯವ ಕೃಷಿ ಕ್ರಾಂತಿ ಶುರುವಾದದ್ದು ಪುಟ್ಟದಾದ ಹಿಮಾಲಯದ ತಪ್ಪಲಿನ ಸಿಕ್ಕಿಂ ರಾಜ್ಯದಲ್ಲಿ!



ಬೆಂಗಳೂರಿನ ಅರಮನೆ ಮೈದಾನದಲ್ಲಿ ಕೃಷಿ ಇಲಾಖೆಯೇ ಸಾವಯವ ಮತ್ತು ಸಿರಿಧಾನ್ಯಗಳ ಮೇಳವನ್ನು ಆಯೋಜಿಸಿತ್ತು. ಸಿರಿಧಾನ್ಯಗಳ ಬಗೆಬಗೆಯ ವಿನ್ಯಾಸವನ್ನು ನೋಡಲಷ್ಟೇ ಅಲ್ಲ, ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಮಂತ್ರಶಕ್ತಿಯೊಂದು ಇದರಲ್ಲಿದೆ ಎಂಬಂತೆ ಜನರು ಮುಗಿಬಿದ್ದು ಅದರಲ್ಲಿ ಭಾಗವಹಿಸಿದ್ದರು.

ಫೋಟೊ: ಎಂ.ಎಸ್. ಮಂಜುನಾಥ್